# ನಗರಸಭಾ ಕಾರ್ಯಾಲಯ ಶಿವಮೊಗ್ಗ.

ಕ್ರಮಾಂಕ : ಕಾವಿ: ಡಿ.ಎಂ.ಸಿಆರ್ : 2007–08 ದಿನಾಂಕ : 21–06–2007

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಶಿವಮೊಗ್ಗ ನಗರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕಾಪಯೋಗಿ ಇಲಾಖೆ ಶಿವಮೊಗ್ಗ ವೃತ್ತದಲ್ಲಿ ಪ್ರಸಕ್ತ ಬ್ಲಾಕ್ ಅವಧಿಗೆ & ನಗರಸಭೆಯಲ್ಲಿ ನೊಂದಾಯಿತ 3 & ಮೇಲ್ಪಟ್ಟು ದರ್ಜೆಯ ಅರ್ಹ ಗುತ್ತಿಗೆದಾರರಿಂದ ಮೊಹರು ಮಾಡಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರಮ ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ | ಫಾರಂ ಶುಲ್ಕ (ತೆರಿಗೆ ಸೇರಿ) |
|---|---|---|---|---|
| 1 | ನಗರದ ಲಷ್ಕರ್‌ಮೊಹಲ್ಲಾದಲ್ಲಿ ನಿರ್ಮಿಸುತ್ತಿರುವ ಮೀನು ಮತ್ತು ಮಾಂಸ ಮಾರುಕಟ್ಟೆ ಕಟ್ಟಡ ನಿರ್ಮಾಣ ಆವರಣದಲ್ಲಿ ಮಟ್ಟ ಮಾಡುವುದು ಮತ್ತು ಅವಶೇಷಗಳನ್ನು ಹೊರಕ್ಕೆ ಸಾಗಿಸುವುದು. | 0.83 | 2100.00 | 100.00 |

1) ಟೆಂಡರ್ ಫಾರಂಗಳಿಗೆ ನಗರಸಭೆ ರಶೀದಿಯೊದಿಗೆ ಅರ್ಜಿಸಲ್ಲಿಸುವ ದಿನಾಂಕ ಮತ್ತು ನಗರಸಭೆಯಿಂದ ಖಾಲಿ ಟೆಂಡರ್ ಪಾರಂಗಳನ್ನು ನೀಡುವ ದಿನಾಂಕ: 21–06–2007
2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು (ಡಬ್ಬಿಗೆ) ಸ್ವೀಕರಿಸುವ ದಿನಾಂಕ: 04–07–2007

## ಷರತ್ತುಗಳು

1) ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣಗಳನ್ನು ಕೊಡದೇ ಅಂಗೀಕರಿಸುವ, ನಿರಾಕರಿಸುವ ಅಥವಾ ರದ್ದುಪಡಿಸುವ ಅಧಿಕಾರ ಆಯುಕ್ತರು ನಗರಸಭೆ ಶಿವಮೊಗ್ಗ ಇವರು ಹೊಂದಿರುತ್ತಾರೆ.
2) ಟೆಂಡರ್‌ಸಲ್ಲಿಸುವಾಗ ಎಸ್.ಆರ್ ದರಕ್ಕಿಂತ ಕಡಿಮೆದರಸಲ್ಲಿಸದಲ್ಲಿ ವ್ಯತ್ಯಾಸದ ಹಣವನ್ನು ಡಿ.ಡಿ ಯೊಂದಿಗೆ ಟೆಂಡರ್‌ನೊಂದಿಗೆಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು.
3) ಮುಂಗಡ ಠೇವಣಿ ಹಣವನ್ನು ಆಯುಕ್ತರು ನಗರಸಭೆ ಶಿವಮೊಗ್ಗ ಇವರ ಹೆಸರಿಗೆ ಅನುಸೂಚಿತ ಬ್ಯಾಂಕ್‌ಗಳ ಡಿ.ಡಿ ಮುಖಾಂತರ ಪಡೆಯತಕ್ಕದ್ದು ಹಾಗೂ ಟೆಂಡರ್ ಸಲ್ಲಿಸುವಾಗ ಲಗತ್ತಿಸತಕ್ಕದ್ದು ತಪ್ಪಿದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು.
4) ಅರ್ಜಿದಾರರು ತಮ್ಮ ಗುತ್ತಿಗೆ ನೋಂದಾವಣಿ ಪತ್ರದ ಪ್ರತಿ ಮತ್ತು ಇ.ಎಂ.ಡಿಯೊಂದಿಗೆ ಅರ್ಜಿ ಸಲ್ಲಿಸುವುದು.
5) ಮೇಲಿನ ಕಾಮಗಾರಿಗೆ ಬೇಕಾಗುವ ಎಲ್ಲಾ ಸಾಮಾಗ್ರಿಗಳನ್ನು ಗುತ್ತಿಗರದಾರರೇ ಖರೀದಿಸಿ ತರಬೇಕಾಗುತ್ತದೆ. ಹಾಗೂ ಸಾಮಾಗ್ರಿಗಳ ಗುಣಮಟ್ಟದ ಖಾತ್ರಿಯ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖೆಯಿಂದ ಕಡ್ಡಾಯವಾಗಿ ತರಬೇಕಾಗುತ್ತದೆ.
6) ಕೆಲಸಕ್ಕೆ ಅವಶ್ಯವಾಗಿ ಬೇಕಾದ ಯಂತ್ರೋಪಕರಣ & ಸಾಮಾಗ್ರಿಗಳನ್ನು ಹೊಂದಿರಬೇಕು & ಈ ಹಿಂದೆ ಯಾವುದೇ ಕೆಲಸಗಳನ್ನು ಪೂರ್ಣಗೊಳಿಸದೇ ಮಧ್ಯದಲ್ಲಿ ತೊರೆದಿರಬಾರದು.
7) ಮಾನ್ಯ ನಿರ್ದೇಶಕರು ಪೌರಾಡಳಿತ. ನಿರ್ದೇಶನಾಲಯ ಬೆಂಗಳೂರು ಇವರ ಆದೇಶನ್ವಯ ಪೂರ್ಣಗೊಂಡ ಕಾಮಗಾರಿಯ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು ಎರಡು ವರ್ಷದ ಅವಧಿಗೆ ಗುತ್ತಿಗೆದಾರರು ಕಾಯ್ದುಕೊಳ್ಳುವ ಜವಾಬ್ದಾರಿ ಇರುತ್ತದೆ. ನಂತರ ಭದ್ರತಾ ಠೇವಣಿಹಣವನ್ನು ನಂತರ ಹಿಂದಿರುಗಿಸಲಾಗುವುದು.
8) ಗುತ್ತಿಗೆದಾರರು ಕಾಮಗಾರಿಯನ್ನು ಎಲ್ಲಾ ರೀತಿಯಿಂದ ಪೂರ್ಣಗೊಳಿಸಿ ಸದರಿ ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸಿದ ಬಗ್ಗೆ ಪರೀಕ್ಷಿಸಿದ ವರದಿ ಬಂದ ನಂತರವೇ ಕಾಮಗಾರಿಯನ್ನು ಹಸ್ತಾಂತರಿಸಿಕೊಳ್ಳಲಾಗುವುದು
9) ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಈ ಕಛೇರಿಯ ಕಾಮಗಾರಿ ವಿಭಾಗದಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

(ಶ್ರೀ ಟಿ.ಕೆ. ಅನಿಲ್ ಕುಮಾರ್) ಭಾ.ಆ.ಸೇ
ಆಡಳಿತಾಧಿಕಾರಿಗಳು
ನಗರಸಭೆ ಶಿವಮೊಗ್ಗ

(ಶ್ರೀ ಬಿ.ಜಯಣ್ಣ) ಕೆ.ಎ.ಎಂ ಎಸ್
ಪೌರಾಯುಕ್ತರು
ನಗರಸಭೆ ಶಿವಮೊಗ್ಗ